ಮುಕ್ತ ಮಾರುಕಟ್ಟೆಯಲ್ಲಿ ದ್ರಾಕ್ಷಿರಸ ಮಾರಾಟ

2600(2957); ಶ್ರೀ ಲೋಬೋ ಜೆ.ಆರ್. (ಮಂಗಳೂರು ನಗರ ದಕ್ಷಿಣ)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಉತ್ಪಾದನೆಯಾಗಿರುವ ದ್ರಾಕ್ಷಿ ರಸ (ವೈನ್) ಪ್ರಮಾಣ ಎಷ್ಟು; ಈ ಪೈಕಿ ರಫ್ತು ಮಾಡಿದ ಪ್ರಮಾಣ ಎಷ್ಟು (ವಿವರ ನೀಡುವುದು);

ಆ) ಈ ಅವಧಿಯಲ್ಲಿ ಮಾರಾಟವಾಗಿರುವ ದ್ರಾಕ್ಷಿರಸ (Wine) ಪ್ರಮಾಣ ಎಷ್ಟು (ಸಂಪೂರ್ಣ ವಿವರ ನೀಡುವುದು);

ಇ) ವೈನ್ ತಯಾರಿಕೆ ಹಾಗೂ ದ್ರಾಕ್ಷಿ ಬೆಳೆಗೆ ಉತ್ತೇಜನ ನೀಡಲು ಯಾವುದೇ ನಿರ್ಬಂಧನೆ ಇಲ್ಲದೆ ಮುಕ್ತ ಮಾರುಕಟ್ಟೆ ಮಾರಾಟ ಮಾಡಲು ಅನುಮತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಉತ್ಪಾದನೆಯಾಗಿರುವ ಮತ್ತು ರಫ್ತು ಮಾಡಿದ ದ್ರಾಕ್ಷಿರಸ (ವೈನ್) ಪ್ರಮಾಣ ಕೆಳಕಂಡಂತಿದೆ:

ವರ್ಷ	ಉತ್ಪಾದನೆ (ಬಲ್ಕ್ ಲೀಟರ್‌ಗಳಲ್ಲಿ)	ರಫ್ತು (ಬಲ್ಕ್ ಲೀಟರ್‌ಗಳಲ್ಲಿ)
2011–12	34,54,343	7,33,169
2012–13	37,52,313	4,38,289
2013–14	43,12,689	5,52,130

ಆ)

ವರ್ಷ	ಮಾರಾಟಾಗಿರುವ ದ್ರಾಕ್ಷಿರಸ (ವೈನ್ ಪ್ರಮಾಣ (ಬಲ್ಕ್ ಲೀಟರ್‌ಗಳಲ್ಲಿ)
2011–12	34,45,061
2012–13	35,47,268
2013–14	41,44,479

ಇ) ವೈನ್ ತಯಾರಿಕೆ ಹಾಗೂ ದ್ರಾಕ್ಷಿ ಬೆಳೆಗೆ ಉತ್ತೇಜನ ನೀಡಲು ಯಾವುದೇ ನಿರ್ಬಂಧನೆ ಇಲ್ಲದೆ ಮುಕ್ತ ಮಾರುಕಟ್ಟೆ ಮಾರಾಟ ಮಾಡಲು ಅನುಮತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಶಿಕ್ಷಕರ ಕೊರತೆ

2603(2491); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ರಾಜ್ಯಾದ್ಯಂತ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಕರು ಹಾಗೂ ಇತರ ಸಿಬ್ಬಂದಿಯ ಕೊರತೆಯಿಂದ ವಿದ್ಯಾರ್ಥಿಗಳ ಪೋಷಕರು ಮತ್ತು ಮಕ್ಕಳನ್ನು ಸಾಲ ಮಾಡಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ದಾಖಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;